ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 19-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **Inauguration of Exhibition of Art works by Noted Painter Smt.Jamini Roy Journey to the Roots.**<br><br>**Inauguration :**<br><br>**R.V.Deshpande**<br><br>**Minister for Higher Education and Tourism** | **20-03-2015**<br><br>**Friday**<br><br>**6.00 P.M** | **National Gallery of Modern Arts**<br><br>**No.49, Manikyavelu Mansion, Palace Road, Bangalore** |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದ ಸುದ್ದಿಗಳು:

### ಕೆ.ಎನ್.ಟೇಲರ್‌ಗೆ ವಿಧಾನ ಸಭೆ ಸಂತಾಪ

ಬೆಂಗಳೂರು, ಮಾರ್ಚ್ 19, (ಕರ್ನಾಟಕ ವಾರ್ತೆ):

ಇಂದು ವಿಧಾನ ಸಭೆ ಕಲಾಪ ಆರಂಭಗೊಳ್ಳುತ್ತಿದ್ದಂತೆ ವಿಧಾನಸಭಾ ಅಧ್ಯಕ್ಷ ಶ್ರೀ ಕಾಗೋಡು ತಿಮಪ್ಪ ಅವರು ತುಳು ಚಿತ್ರರಂಗದ ನಟ, ನಿರ್ದೇಶಕ ಕೆ.ಎನ್.ಟೇಲರ್ ಅವರ ನಿಧನಕ್ಕೆ ಸಂತಾಪ ಸೂಚನೆ ಮಂಡಿಸಿದರು. ಸಭೆಯು ಒಂದು ನಿಮಿಷ ಮೌನ ಆಚಾರಿಸಿತು.

ಬಾಬು/ಸೌಮ್ಯ

## ವಿಧೇಯಕ ಮಂಡನೆ

ಬೆಂಗಳೂರು, ಮಾರ್ಚ್ 19, (ಕರ್ನಾಟಕ ವಾರ್ತೆ):

ರಾಜ್ಯ ವಿಧಾನ ಸಭೆಯಲ್ಲಿ ಇಂದು 2015ನೇ ಸಾಲಿನ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ.ಜಯಚಂದ್ರ ಮಂಡಿಸಿದರು.

ವಿಧಾನಸಭೆಯ ಕಲಾಪವನ್ನು ಮಾರ್ಚ್ 23 ರ ಸೋಮವಾರಕ್ಕೆ ಮುಂದೂಡಲಾಯಿತು.

ಬಾಬು/ಸೌಮ್ಯ

## ಕೆ.ಓ.ಎಸ್ ಪರೀಕ್ಷಾ ಪ್ರವೇಶ ಪತ್ರ ಪಡೆಯಲು ಸೂಚನೆ

ಬೆಂಗಳೂರು, ಮಾರ್ಚ್ 19, (ಕರ್ನಾಟಕ ವಾರ್ತೆ):

ಕರ್ನಾಟಕ ಮುಕ್ತ ಶಾಲೆ–ಕೆ.ಓ.ಎಸ್ ಪರೀಕ್ಷೆಯನ್ನು ದಿನಾಂಕ: 30–3–2015 ರಿಂದ ದಿನಾಂಕ: 10–4–2015 ರವರೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಸಲಾಗುವುದೆ. ಪ್ರವೇಶಪತ್ರಗಳನ್ನು ಎಲ್ಲಾ ಕೆ.ಓ.ಎಸ್ ಕಲಿಕಾ ಕೇಂದ್ರಗಳಿಗೆ ಕಳುಹಿಸಲಾಗಿದೆ. ವಿದ್ಯಾರ್ಥಿಗಳು ಸಂಬಂಧಿಸಿದ ಕರ್ನಾಟಕ ಮುಕ್ತ ಶಾಲಾ ಕಲಿಕಾ ಕೇಂದ್ರಗಳಿಂದ ಪ್ರವೇಶ ಪತ್ರಗಳನ್ನು ಪಡೆದುಕೊಳ್ಳುವಂತೆ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಬು/ಸೌಮ್ಯ

## ಕೋಳಿ ಸಾಗಾಣಿಕೆ ತರಬೇತಿ

ಬೆಂಗಳೂರು, ಮಾರ್ಚ್ 19, (ಕರ್ನಾಟಕ ವಾರ್ತೆ):

ರಾಜ್ಯ ಕೋಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಹೆಸರುಘಟ್ಟ, ಬೆಂಗಳೂರು–560089 ಇಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖಾವತಿಯಿಂದ ದಿನಾಂಕ: 23–3–2015 ರಿಂದ 28–03–2015 ರವರೆಗೆ 6 ದಿನಗಳ ಕೋಳಿ ಸಾಕಾಣಿಕೆಯ ಬಗ್ಗೆ ತರಬೇತಿಯನ್ನು ಏರ್ಪಡಿಸಲಾಗಿದ್ದು. ಇಚ್ಛೆಯುಳ್ಳವರು ಈ ತರಬೇತಿಗೆ ಹಾಜರಾಗಲು ತಿಳಿಸಲಾಗಿದೆ. ತರಬೇತಿ ಅವಧಿಯಲ್ಲಿ ಪ್ರೋತ್ಸಾಹ ಧನವಾಗಿ ಪ್ರತಿ ಒಂದು ದಿನಕ್ಕೆ ರೂ.150 ಗಳಂತೆ 6 ದಿನಗಳಿಗೆ ಒಟ್ಟು ರೂ.900 ಗಳನ್ನು ನೀಡಲಾಗುವುದು. ತರಬೇತಿಗೆ ಹಾಜರಾಗುವ ತರಬೇತಿದಾರರು ಮೂರು ಪಾಸ್ ಪೋರ್ಟ್ ಗಾತ್ರದ ಭಾವಚಿತ್ರ ಹಾಗೂ ವಾಸ ಸ್ಥಳದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇತಿ ಕೇಂದ್ರದಲ್ಲಿ

ಹಾಜರುಪಡಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸದ ದೂರವಾಣಿ ಸಂಖ್ಯೆ: 080–28466093.

ಬಾಬು/ಸೌಮ್ಯ

## ಬೆಂಗಳೂರಿನಲ್ಲಿ ತಮಿಳುನಾಡು ಹ್ಯಾಂಡ್‌ಲೂಮ್ ಎಕ್ಸ್‌ಪೊ

ಬೆಂಗಳೂರು, ಮಾರ್ಚ್ 19, (ಕರ್ನಾಟಕ ವಾರ್ತೆ):

ತಮಿಳುನಾಡು ಸರ್ಕಾರದ ಕೈಮಗ್ಗ ಮತ್ತು ಜವಳಿ ಇಲಾಖೆ ಬೆಂಗಳೂರಿನ ಜಯನಗರದಲ್ಲಿರುವ ಹೇಮಚಂದ್ರ ಕಲ್ಯಾಣ ಮಂದಿರಲ್ಲಿ ಮಾರ್ಚ್ 20 ರಿಂದ 29 ರವರೆಗೆ ತಮಿಳುನಾಡು ಹ್ಯಾಂಡ್‌ಲೂಮ್ ಎಕ್ಸ್‌ಪೊ ಏರ್ಪಡಿಸಿದೆ. ಇದರ ಉದ್ಘಾಟನೆಯನ್ನು ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ॥ ಶಾಲಿನಿ ರಜನೀಶ್ ಅವರು ಉದ್ಘಾಟಿಸುವರು. ತಮಿಳುನಾಡು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ ನಿರ್ದೇಶಕ ತಿರು.ಎಸ್.ವಿ.ಕಂದಸ್ವಾಮಿ ಸಮಾರಂಭದಲ್ಲಿ ಭಾಗವಹಿಸುವರು.

ಬಾಬು/ಸೌಮ್ಯ

## Poultry Training

**Bangalore, Mar 19, (Karnataka News):**

**The State Poultry Breeding and Training Centre, Hesaraghatta, Bangalore-560089. Under the Department of Animal Husbandry and Veterinary Services, has organised 6 days Poultry Training Programme, from 23-3-2015 to 28-03-2015. Interested persons can attend the Training Programme at Hesaraghatta. During the Training period incentive of Rs.150 per day will be given to the trainees as per rules. Trainees should produce three pass port size photographs and address proof. For more details contact Phone No: 08028466093.**

ಬಾಬು/ಸೌಮ್ಯ

## Admission Tickets for K.O.S Exams

**Bangalore, Mar 19, (Karnataka News):**

**Karnataka Open School-K.O.S Examination will be conducted from 30-3-2015 to 10-4-2015 by Karnataka Secondary Education**

**Examination Board. Admission Tickets jave beem despatched to all the Karnataka Open School-K.O.S Study Centres. Students are informed to collect the same from the concerned Karnataka Open School-K.O.S Study Centres as per the Statement of Director Karnataka Secondary Education Examination Borad.**

ಬಾಬು/ಸೌಮ್ಯ